# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರು : ಶ್ರೀ ಸೂರಜ್ ರೇವಣ್ಣ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 144

ಉತ್ತರಿಸಬೇಕಾದ ದಿನಾಂಕ : 04.03.2025

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 5 ವರ್ಷಗಳಲ್ಲಿ ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಸಹಕಾರ ಇಲಾಖೆಯಡಿ ನೋಂದಾಯಿಸಲ್ಪಟ್ಟ ಹಾಲು ಉತ್ಪಾದಕರ ಮಹಿಳಾ ಸಂಘ ಸಂಸ್ಥೆಗಳೆಷ್ಟು; ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳೆಷ್ಟು: ಸ್ಥಗಿತಗೊಂಡಿರುವ (ಸಂಘ ಸಂಸ್ಥೆ ಗಳೆಷ್ಟು); (ಸಂಘ ಸಂಸ್ಥೆಗಳವಾರು ವಿವರ ನೀಡುವುದು)</td><td>ಕಳೆದ 5 ವರ್ಷಗಳಲ್ಲಿ ಹಾಸನ ಜಿಲ್ಲೆ ವ್ಯಾಪ್ತಿಯಲ್ಲಿ ಸಹಕಾರ ಇಲಾಖೆಯಡಿ ನೋಂದಾಯಿಸಲ್ಪಟ್ಟ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ವಿವರ ಈ ಕೆಳಕಂಡಂತಿವೆ.<br><table><tr><th>ಕ್ರ.ಸಂ</th><th>ಕಾರ್ಯನಿರತ</th><th>ಸ್ಥಗಿತ</th><th>ಒಟ್ಟು</th></tr><tr><td>1</td><td>119</td><td>5</td><td>124</td></tr></table>ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಹಾಗಿದ್ದಲ್ಲಿ ಸರ್ಕಾರಿ/ಖಾಸಗಿ ಕಟ್ಟಡ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಲು ಉತ್ಪಾದಕರ ಮಹಿಳಾ ಸಂಘ ಸಂಸ್ಥೆಗಳ ವಿವರ ನೀಡುವುದು; ಸ್ಥಗಿತಗೊಂಡ ಹಾಲು ಉತ್ಪಾದಕರ ಸಂಘ ಸಂಸ್ಥೆಯು ಹೊಂದಿರುವ ಸರ್ಕಾರಿ ಕಟ್ಟಡಗಳನ್ನು ಇಲಾಖೆಯ ಸುಪರ್ಧಿಗೆ ಪಡೆಯಲಾಗಿದೆಯೇ; ಇಂತಹ ಕಟ್ಟಡಗಳಲ್ಲಿ ಅನಧಿಕೃತ ಹಾಲು ಮಾರಾಟದ ವಹಿವಾಟು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರಿ /ಖಾಸಗಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ: 119 ಇದ್ದು ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br><br>ಸ್ಥಗಿತಗೊಂಡ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನಿಯಮಾನುಸಾರ ಸಮಾಪನೆಗೊಳಿಸಿದ ನಂತರ ಸಂಘದ ಕಟ್ಟಡಗಳನ್ನು ಸಮಾಪನಾಧಿಕಾರಿಗಳ ಸುಪರ್ದಿಗೆ ಪಡೆಯಲಾಗುತ್ತದೆ.<br><br>ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡಗಳಲ್ಲಿ ಅನಧಿಕೃತ ಹಾಲು ಮಾರಾಟದ ವಹಿವಾಟು ನಡೆಸುತ್ತಿರುವುದು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ, ಹಾಸನ ಮತ್ತು ಸಹಕಾರ ಅಭಿವೃದ್ಧಿ ಅಧಿಕಾರಿ, ಅರಸೀಕೆರೆ ತಾಲ್ಲೂಕು/ ಸಮಾಪನಾಧಿಕಾರಿಗಳ ಗಮನಕ್ಕೆ ಬಂದಿರುತ್ತದೆ.</td></tr>
</table>

| | | |
|---|---|---|
| ಇ | ಹಾಗಿದ್ದಲ್ಲಿ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಬಾಣಾವಾರ ಹೋಬಳಿಯ ಚಲುವನಹಳ್ಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಸಂಘ ಸರ್ಕಾರಿ ಕಟ್ಟಡದಲ್ಲಿ ಅನಧಿಕೃತವಾಗಿ ಎಸ್.ಎಸ್. ಡೈರಿ ಹೆಸರಿನ ಸಂಸ್ಥೆಯು ಹಾಲು ಮಾರಾಟ ಮಾಡುತ್ತಿರುವುದರಿಂದ ಸರ್ಕಾರದ ಯೋಜನೆಗಳು ಇಲಾಖೆಯ ಮುಖಾಂತರ ತಲುಪದೇ ಗ್ರಾಮಸ್ಥರಿಗೆ ಅನ್ಯಾಯವಾಗು ತ್ತಿರುವುದನ್ನು ಗ್ರಾಮಸ್ಥರು ವಿರೋಧಿಸಿದ್ದು, ಅದು ಸ್ಥಳೀಯ ಪತ್ರಿಕೆಯಲ್ಲಿ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು: (ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಬಾಣಾವಾರ ಹೋಬಳಿಯ ಚಲುವನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಹಾಸನ ಈ ಸಂಘವು 1998-99 ನೇ ಸಾಲಿನಲ್ಲಿ ನೋಂದಣಿಗೊಂಡಿದ್ದು, ನೋಂದಣಿಯಾದ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸದೇ ದಿನಾಂಕ:12.01.2011 ರಿಂದ ಸ್ಥಗಿತಗೊಂಡಿದ್ದು, ತದನಂದರ ದಿನಾಂಕ:30.12.2014 ರಲ್ಲಿ ಸಮಾಪನಗೊಳಿಸಲಾಗಿರುತ್ತದೆ. ಸದರಿ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಅರಸೀಕೆರೆ ತಾಲ್ಲೂಕು ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಲಾಗಿರುತ್ತದೆ. ಸಂಘವು 20*30 ಅಡಿಗಳ ವಿಸ್ತೀರ್ಣದ ಸ್ವಂತ ಕಟ್ಟಡವನ್ನು ಹೊಂದಿದ್ದು, ಇದು ಸಮಾಪನಾಧಿಕಾರಿಯವರ ಸುಪರ್ದಿಯಲ್ಲಿರುತ್ತದೆ. ಈ ಕಟ್ಟಡದಲ್ಲಿ ಅನಧಿಕೃತವಾಗಿ ಎಸ್.ಎಸ್. ಡೈರಿ ಹೆಸರಿನ ಸಂಸ್ಥೆಯು ಹಾಲು ಮಾರಾಟ ಮಾಡುತ್ತಿರುವುದು ಸಹಕಾರ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ಬಂದ ಕಾರಣ ಸಮಾಪನಾಧಿಕಾರಿಯವರು ದಿನಾಂಕ:11.02.2025 ರಂದು ಅರಸೀಕೆರೆ ತಾಲ್ಲೂಕು ಬಾಣಾವಾರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತಾರೆ. ಪೊಲೀಸ್ ಬಂದುಬಸ್ತಿನೊಂದಿಗೆ ಸಂಘದ ಕಟ್ಟಡಕ್ಕೆ ಬೀಗ ಹಾಕಿದ್ದು, ಪ್ರಸ್ತುತ ಸಂಘದ ಕಟ್ಟಡವು ಸಮಾಪನಾಧಿಕಾರಿಯಾದ ಸಹಕಾರ ಅಭಿವೃದ್ಧಿ ಅಧಿಕಾರಿ, ಅರಸೀಕೆರೆ ತಾಲ್ಲೂಕು ಇವರ ಸುಪರ್ದಿಯಲ್ಲಿರುತ್ತದೆ. |

**ಕಡತ ಸಂಖ್ಯೆ: ಸಿಒ 28 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು